## ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

**ದಿನಾಂಕಃ- 29.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ-   ಪ್ರತಿವಾದಿಗಳ ಪರ ವಕೀಲರಾದ ಶ್ರೀ.ಟಿ.ಜಿ.ಎಂ.ರವರಿಂದ**

ನಾನು ಗೃಹಿಣಿಯಾಗಿರುತ್ತೇನೆ. ಯಾವುದೇ ಕೆಲಸ ಮಾಡಿರುವುದಿಲ್ಲ. ದಾವಾಸ್ವತ್ತಿನಲ್ಲಿ ಪ್ರತಿವಾದಿಗಳು ತೊಂದರೆ ಮಾಡುತ್ತಿದ್ದುದ್ದರಿಂದ ನಾನು ಈ ದಾವೆಯನ್ನು ಹಾಕಿದ್ದೇನೆ. ದಾವಾಸ್ವತ್ತಿನ ಖಾತೆ ನಂಬರ್ 670  ಆಗಿರುತ್ತದೆ, ಇದರ ವಿಸ್ತೀರ್ಣ 9.14 X 7.62 ಮೀಟರ್ ಆಗಿರುತ್ತದೆ. ದಾವಾಸ್ವತ್ತನ್ನು ನಾವು ಖರೀದಿ ಮಾಡಿದ ಕಾಲಕ್ಕೆ ಅದು ಖಾಲಿ ನಿವೇಶನ ಆಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ಸುಮಾರು 10 ವರ್ಷಗಳ ಹಿಂದೆ ಅದರಲ್ಲಿ  ಮನೆ ಕಟ್ಟಿರುತ್ತೇನೆ ಎನ್ನುತ್ತಾರೆ.

2. ನಾನು 2009 ರಲ್ಲಿ ದಾವಾಸ್ವತ್ತನ್ನು ಖರೀದಿ ಮಾಡಿರುತ್ತೇನೆ , ಯಾವ ದಿನಾಂಕ ಮತ್ತು ತಿಂಗಳು ಎಂದು ನನಗೆ ನೆನಪಿಲ್ಲ. ನಾನು ಮನೆಕಟ್ಟಲು ಲೈಸೆನ್ಸ್ ಅನ್ನು ಸಹ ಪಡೆದುಕೊಂಡಿದ್ದೆ. ಸದರಿ ಲೈಸೆನ್ಸ್ ಅನ್ನು ನಾನು ಈಗಾಗಲೇ ಹಾಜರುಪಡಿಸಿದ್ದೇನೆ. ನಾನು ದಾವಾ ಮನೆಯನ್ನು ಕಟ್ಟಲು ಯಾವುದೇ ಬಿಲ್ಡಿಂಗ್ ಲೈಸೆನ್ಸ್ ಪಡೆದುಕೊಂಡಿಲ್ಲ , ಆದರೂ ಸಹ ಲೈಸೆನ್ಸ್ ಪಡೆದುಕೊಂಡಿರುವುದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವಾಸ್ವತ್ತಿನಲ್ಲಿ ನಾನು ವಿಸ್ತೀರ್ಣ 9.14 X 7.62 ಮೀಟರ್ ನಲ್ಲಿ ಮನೆಕಟ್ಟಿದ್ದೇನೆ. ನಾನು ದಾವಾಮನೆಯ ಸುತ್ತಲು ಜಾಗ ಬಿಟ್ಟಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತಿನ ಪೂರ್ತಿ ವಿಸ್ತೀರ್ಣದಲ್ಲಿ ಮನೆಕಟ್ಟಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿರುವ ಮನೆಗೆ ಪೂರ್ತಿ ಕಾಂಪೌಂಡ್ ಹಾಕಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ದಾವಾಸ್ವತ್ತಿನ ಪೂರ್ವದಲ್ಲಿ ಮಾತ್ರ ಕಾಂಪೌಂಡ್ ಕಟ್ಟಿದ್ದೇವೆ ಎನ್ನುತ್ತಾರೆ. ನಾನು ದಾವಾಸ್ವತ್ತಿನ ದಕ್ಷಿಣದಲ್ಲಿ ಜಾಗ ಬಿಟ್ಟಿದ್ದೇನೆ ಎಂದು ತೋರಿಸಲು ನಾನು ಈಗಾಗಲೇ ಜಾಗ ಬಿಟ್ಟಿದ್ದೇನೆ. ನಾನು ದಾವಾಸ್ವತ್ತಿನ ದಕ್ಷಿಣದಲ್ಲಿ ಯಾವುದೇ ಖಾಲಿ ಜಾಗ ಬಿಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾಸ್ವತ್ತನ್ನು ಒತ್ತುವರಿ ಮಾಡಲು ಪ್ರಯತ್ನ ಪಟ್ಟಿಲ್ಲ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತಿನ ದಕ್ಷಿಣದಲ್ಲಿ ಓಣಿ ಬಿಟ್ಟುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತಿನಲ್ಲಿ ಪೂರ್ತಿ ವಿಸ್ತೀರ್ಣದಲ್ಲಿ ಮನೆಕಟ್ಟಿದ್ದು ಹಾಗೂ ಮನೆಯ ಸುತ್ತ ಕಾಂಪೌಂಡ್ ಹಾಕಿರುವುದರಿಂದ ದಕ್ಷಿಣದ ದಿಕ್ಕಿನಿಂದ ಪ್ರತಿವಾದಿಗಳು ಒತ್ತುವರಿ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾಸ್ವತ್ತಿನಲ್ಲಿ ನನ್ನ ಸ್ವಾಧೀನಾನುಭವಕ್ಕೆ ಎಂದಿಗೂ ತೊಂದರೆ ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ತೊಂದರೆ ಕೊಡುವ ದುರುದ್ದೇಶದಿಂದ ಅವರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯನ್ನು ಹಾಕಲು ವ್ಯಾಜ್ಯ ಕಾರಣ ಇಲ್ಲದಿದ್ದರೂ ಸಹ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

4. 1999 ರಲ್ಲಿ ಗ್ರಾಮಪಂಚಾಯಿತಿಯ ಬದಲಿಗೆ ಮಂಡಲಪಂಚಾಯಿತಿ ಇತ್ತು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ದಿಃ23-07-1999 ರಲ್ಲಿ ನಿಟ್ಟೂರು ಮಂಡಲಪಂಚಾಯಿತಿಯಿಂದ 20X20 ಅಡಿಗಳ ಕ್ರಸಂಃ 87/1 ರ ಖಾಲಿ ನಿವೇಶನ ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ 1 ನೇ ಪ್ರತಿವಾದಿಗೆ ಹೆಸರಿಗೆ ಖಾತೆ ನಂಃ 1282 ರಂತೆ ಖಾತೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾಸ್ವತ್ತನ್ನು ಖರೀದಿ ಮಾಡುವ ಮೊದಲೇ ಪ್ರತಿವಾದಿಗಳು ಮೇಲೆ ಹೇಳಿದ ಖಾಲಿ ನಿವೇಶನದಲ್ಲಿ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ.

5. ನಾನು ದಾವಾಸ್ವತ್ತನ್ನು ಖರೀದಿ ಮಾಡುವ ಮೊದಲೇ ಪ್ರತಿವಾದಿಗಳು ಮೇಲೆ ಹೇಳಿದ ಖಾಲಿ ನಿವೇಶನದಲ್ಲಿ ಸುತ್ತಲೂ ಜಾಗಬಿಟ್ಟುಕೊಂಡು ಹೆಂಚಿನ ಮನೆಕಟ್ಟಿಕೊಂಡು ವಾಸವಾಗಿದ್ದರು ಎಂದರೆ ಸರಿಯಲ್ಲ. ಸದರಿ ಮನೆ ಶಿಥಿಲ ಗೊಂಡಿದೆ ಎಂದು ಹೇಳಿ ಪ್ರತಿವಾದಿಗಳು ಇತ್ತೀಚೆಗೆ 8 ವರ್ಷದ ಹಿಂದೆ ಅದೇ ಮನೆಯ ಮೇಲೆ ಆರ್.ಸಿ.ಸಿ. ಮೋಲ್ಡ್ ಹಾಕಿದ್ದಾರೆ ಎಂದರೆ ಸರಿ. ಸುಮಾರು 20 ವರ್ಷಗಳ ಹಿಂದೆ ಪ್ರತಿವಾದಿಗಳು ತಮ್ಮ ಹೆಂಚಿನ ಮನೆಯ ಪಶ್ಚಿಮ - ಉತ್ತರ ಭಾಗದಲ್ಲಿ ಒಂದು ಸ್ನಾನದ ಮನೆಯನ್ನು ಕಟ್ಟಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಸ್ನಾನದ ಗೃಹಕ್ಕೆ ಓಡಾಡಲು ಪ್ರತಿವಾದಿಗಳು ಅವರ ಸ್ವತ್ತಿನ ಉತ್ತರ ಭಾಗದಲ್ಲಿ ಹಾಗೂ ನನ್ನ ದಾವಾಸ್ವತ್ತಿನ ದಕ್ಷಿಣ ಭಾಗದಲ್ಲಿ ಸುಮಾರು 4 ಅಡಿ ಜಾಗ ಬಿಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ಅಂದಿನಿಂದ ಇಂದಿನವರೆಗೂ ಪ್ರತಿವಾದಿಗಳು ಸದರಿ 4 ಅಡಿ ಜಾಗದಲ್ಲಿ ಸ್ನಾನದ ಗೃಹಕ್ಕೆ ಓಡಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸುಮಾರು 20 ವರ್ಷಗಳಿಂದಲೂ ಯಾವುದೇ ಅಡ್ಡಿ ಆತಂಕ ಇಲ್ಲದೇ ಸದರಿ 4 ಅಡಿ ಓಣಿ ಜಾಗದಲ್ಲಿ ಓಡಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸೇರಿದ 4 ಅಡಿ ಓಣಿ ಜಾಗವನ್ನು ಕಬಳಿಸಿಕೊಳ್ಳುವ ದುರುದ್ದೇಶದಿಂದ ನಾನು ಪ್ರತಿವಾದಿಗಳ ವಿರುದ್ದ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ಪ್ರತಿವಾದಿಗಳು ಮೇಲೆ ಹೇಳಿದ ಅವರ ಸ್ವತ್ತಿನ ಬಾಬ್ತು ಇ-ಖಾತೆ ಮಾಡಿಸಲು ಗ್ರಾಮಪಂಚಾಯಿತಿಯಲ್ಲಿ ಅರ್ಜಿಯನ್ನು ಸಹ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಹೆಸರಿಗೆ ಖಾತೆ ಮಾಡಬಾರದು , ದಾವೆ ಚಾಲ್ತಿಯಲ್ಲಿದೆ ಎಂದು ನಾನು ಗ್ರಾಮಪಂಚಾಯಿತಿಯಲ್ಲಿ ತಕರಾರು ಕೊಟ್ಟಿದ್ದೇನೆಎಂದರೆ ಸರಿ. ಪ್ರತಿವಾದಿಗಳಿಗೆ ಅವರ ಸ್ವತ್ತಿನಲ್ಲಿ ನಾನೇ ತೊಂದರೆಯನ್ನು ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಚಕ್ಕುಬಂದಿ ನನಗೆ ಗೊತ್ತು. ಪೂರ್ವಕ್ಕೆ- ರಸ್ತೆ , ದಕ್ಷಿಣಕ್ಕೆ- ಖರಾಬು , ಉತ್ತರಕ್ಕೆ - ರೇವಣಸಿದ್ದಯ್ಯ , ಪಶ್ಚಿಮಕ್ಕೆ- ಕರಿಯಪ್ಪನವರ ಮನೆ ಇದೆ. ನಾನು ಈಗ ಮೇಲೆ ಹೇಳಿದ ಚಕ್ಕುಬಂದಿಯಲ್ಲಿ ದಾವಾಸ್ವತ್ತು ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ .**

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ.

P.W.1 present she is cross examined by defendant counsel in length and closed his side.

Plaintiff counsel prays time for further plaintiff evidence.

For further plaintiff evidence.

Call on. 20.02.2024.

Prl.C.J and JMFC, Gubbi.